'ನನ್ನ ತಂಗಿಯ ಮದುವೆಗೆ ಖಂಡಿತ ಬರಲೇಬೇಕು ಸರ್, ನಮ್ಮ ಸೆಕ್ಷನ್‌ನಿಂದ ಎಲ್ಲರೂ ಬರ್ತಿದ್ದಾರೆ...' ಸಹಾಯಕ ವಾಸು ಒತ್ತಾಯಕ್ಕೆ ಮಣಿದು ನಾನು ಮದುವೆಗೆ ಹೊರಟಿದ್ದೆ. ಭಾನುವಾರ ಮದುವೆ, ಶನಿವಾರ ಆರತಕ್ಷತೆ. ಶುಕ್ರವಾರದ ರಾತ್ರಿ ರೈಲಿಗೆ ಹೋಗಿ ಧಾರೆ ಮುಗಿಸಿ ಸಂಜೆ ರೈಲಿನಲ್ಲಿ ವಾಪಸಾಗುವುದು – ಇದು ಕಾರ್ಯಕ್ರಮ. ನಾನು ಒಬ್ಬನೇ ಮನೆಯಲ್ಲಿದ್ದು ಮಾಡುವುದೇನು? ಇನ್ನೂ ಒಂದು ವರ್ಷ ಈ ಊರಿನಲ್ಲಿ ಕಾಲ ತಳ್ಳಲೇ ಬೇಕು. 'ಬಡ್ತಿಯೊಂದಿಗೆ ಬೇರೆ ಊರಿಗೆ ವರ್ಗ' ಎಂದು ಗೊಣಗಿದಾಗ, 'ನೋ ಪ್ರಾಬ್ಲೆಮ್, ಪ್ರಮೋಷನ್ ಬೇಕು ಅಂದ್ರೆ ಹೋಗಿ, ಬೇಡವಾದರೆ ಬರೆದುಕೊಡಿ, ಇನ್ನು ಎರಡು ವರ್ಷ ನಿಮ್ಮ ಹೆಸರನ್ನು ಲಿಸ್ಟ್‌ಗೆ ಸೇರಿಸೋಲ್ಲ ಅನ್ನೋದು ನೆನಪಿದೆಯಲ್ಲ?' ಎಂಬ ಮೇಲಧಿಕಾರಿಗಳ ಖಡಕ್ ಮಾತು ತುಸು ಯೋಚಿಸುವಂತೆ ಮಾಡಿತ್ತು. ಪ್ರಮೋಷನ್ ಬೇಕು – ಸಂಬಳ, ಸವಲತ್ತು, ಅಧಿಕಾರ ಎಲ್ಲವೂ ಸಿಗುತ್ತದೆ. ಆದರೆ ಇದೇ ಊರಿನಲ್ಲಿ ಅಲ್ಲ, ಹನ್ನೆರಡು ತಾಸಿನ ಪ್ರಯಾಣ ಮಾಡಬೇಕಾದ ಊರಿನಲ್ಲಿ.

ಮಗಳು ವರ್ಷಿ ಸೆಕೆಂಡು ಪಿಯುಸಿ, ಮಗ ಹರ್ಷ ಡಿಗ್ರೀ ಕೊನೆಯ ವರ್ಷದಲ್ಲಿದ್ದಾರೆ. ಇಬ್ಬರಿಗೂ ತೊಂದರೆಯಾದೀತು. ಮತ್ತೆ, ವಯಸ್ಸಾದ ಅಮ್ಮನನ್ನು ಬಿಟ್ಟು ಹೆಂಡತಿಗೆ ಬರಲಾಗದು. ಹೇಗೋ ಎರಡು ವರ್ಷ ಕಷ್ಟ ಪಟ್ಟರೆ ನನ್ನೂರಿಗೆ ಮರಳಬಹುದು ಎಂದು ಲೆಕ್ಕಾಚಾರ ಹಾಕಿ ಬಡ್ತಿಯನ್ನು ಒಪ್ಪಿ ಇಲ್ಲಿಗೆ ಬಂದಿದ್ದೆ. ಈ ಊರಲ್ಲಿ ಮನೆ ಮಾಡಿದ್ದೆ. ಕಾಫಿಯೊದನ್ನು ಮಾಡಿಕೊಳ್ಳುತ್ತಿದ್ದೆ; ಉಳಿದಂತೆ ಬೆಳಗಿನ ತಿಂಡಿ, ಮಧ್ಯಾಹ್ನ, ರಾತ್ರಿಯ ಊಟ ಎಲ್ಲ ಮನೆಯ ತಿರುವಿನಲ್ಲಿದ್ದ ಮೆಸ್‌ನಲ್ಲಿ ನಡೆಯುತ್ತಿತ್ತು. ಆಫೀಸಿನಿಂದ ಮನೆಗೆ ಹತ್ತು ನಿಮಿಷದ ನಡಿಗೆ. ಉಳಿದಂತೆ ಆಫೀಸಿನಲ್ಲಿ ಯಾವ ಕಿರಿಕಿರಿಯೂ ಇಲ್ಲದ್ದು ನೆಮ್ಮದಿಯಿಂದ ಕೆಲಸ ಮಾಡುವಂತಾಗಿತ್ತು. ಆಫೀಸಿನಲ್ಲಿ ಯಾರ ಮನೆಯ ಕಾರ್ಯಕ್ರಮವಾದರೂ ನನಗೆ ಇಷ್ಟವಿರಲಿ ಇಲ್ಲದಿರಲಿ ಬಲವಂತವಾಗಿ ತಮ್ಮೊಂದಿಗೆ ಕರೆದುಕೊಂಡು ಹೋಗುತ್ತಿದ್ದರು. 'ಒಬ್ಬರೇ ಏನು ಮಾಡ್ತೀರಿ ಬನ್ನಿ ಸರ್, ನಿಮಗೂ ಒಂದು ಬದಲಾವಣೆ' ಎನ್ನುವಾಗ ಒಪ್ಪುತ್ತಿದ್ದೆ. ಇನ್ನು ಇದೂ ಅಷ್ಟೇ. ಎಲ್ಲಿ ಹೋದರೂ ಕೈಯಲ್ಲಿ ಒಂದೆರಡು ಪುಸ್ತಕವಿರುವುದರಿಂದ ಪ್ರಯಾಣ ಬೇಸರವಾಗದು.

★★★

ನಾನು ವಿಚಲಿತಗೊಂಡಿದ್ದು ಮದುವೆ ರಿಸೆಪ್ಷನ್‌ನಲ್ಲಿ; ಗ್ರೂಪ್ ಫೋಟೊ ತೆಗೆಸಿ ವೇದಿಕೆ ಇಳಿಯುವಾಗ ಅಲ್ಲವೇ ಆ ಮುಖ ಕಣ್ಣಿಗೆ ಬಿದ್ದದ್ದು? ತುಂಬಾ ಹತ್ತಿರದಿಂದ ಎಲ್ಲೋ ನೋಡಿದಂತಿದೆ ಎಂಬ ಭಾಸ. ಹೆಸರು ತಕ್ಷಣಕ್ಕೆ ಹೊಳೆಯಲಿಲ್ಲ. ಡೈನಿಂಗ್ ಹಾಲಿನಲ್ಲಿ ನಮ್ಮ ಎದುರು ಸಾಲಿನಲ್ಲಿ ಕುಳಿತಾಗ ಮತ್ತೆ ಆ ಮುಖ ಕಂಡಿತು. ಮತ್ತೆ ನೆನಪಿನ ಕೋಶದಲ್ಲಿ ಹುಡುಕಾಟ. ರಾತ್ರಿ ಕಣ್ಮುಚ್ಚುವಾಗ ಗಂಭೀರವಾಗಿ ಯೋಚಿಸತೊಡಗಿದ್ದೆ. ಈ ಮೊದಲು ಕೆಲಸ ಮಾಡಿದ ಜಾಗಗಳಾದರೆ ನಮ್ಮ ಕಚೇರಿಯ ಯಾವುದೇ ಶಾಖೆಯ ಯಾರೊಬ್ಬರಾದರು ಗುರುತಿಸುತ್ತಿದ್ದರು; ಹೀಗಾಗಿ ಕಚೇರಿಯವರಲ್ಲ. ಅದರ ಹೊರತಾಗಿ ಕಾಲೇಜಿನಲ್ಲಿ? ಪಿಯುಸಿ ಅಥವಾ ಪದವಿ ಅವಧಿಯಲ್ಲಿ ನನ್ನ ಕಾಲೇಜಿನಲ್ಲಿ ನೋಡಿರಬಹುದೇ? ಇಲ್ಲ, ಮುಖದಲ್ಲಿ ಜೊತೆಯಲ್ಲಿ ಕಲಿತವರ ಯಾವ ಹೆಸರಿಗೂ ಹೋಲಿಕೆ ಕಾಣುತ್ತಿಲ್ಲ. ಇನ್ನು ಹಿಂದಕ್ಕೆ ಹೋದರೆ? ಯೋಚಿಸುತ್ತ ನಿದ್ದೆಗೆ ಜಾರಿದ್ದೆ.